<u>ಅಸಲು ದಾವಾ:-</u> 34/2018 ಡಿ.ಡಬ್ಲ್ಯೂ:- 2

ದಿನಾಂಕ: 17.02.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು:- ವಾದಿ ಪರ ಶ್ರೀ.ಟಿ ಎನ್ ಎಂ ವಕೀಲರಿಂದ</u>

ವಾದಿ ದಾವೆಯನ್ನು ಯಾರ ವಿರುದ್ಧ ಯಾವ ಪರಿಹಾರ ಕೋರಿ ಹಾಕಿದ್ದಾರೆಂದು ಗೊತ್ತಿದೆಯಾ ಎಂದರೆ ಗೊತ್ತಿದೆ ಎಂದು ನುಡಿಯುತ್ತಾರೆ. ದಾವಾ ಹಾಕುವ ಮುನ್ನ ವಾದಿ ನನ್ನ ತಂದೆ 1 ನೇ ಪ್ರತಿವಾದಿಗೆ ವಕೀಲರ ಮೂಲಕ ನೋಟೀಸ್ ನೀಡಿರುವ ವಿಚಾರ ಗೊತ್ತಿದೆಯಾ ಎಂದರೆ ಗೊತ್ತಿದೆ ಎಂದು ನುಡಿಯುತ್ತಾರೆ. ಸದರಿ ವಕೀಲರ ನೋಟೀಸಿಗೆ ನಮ್ಮ ತಂದೆ ಉತ್ತರ ನೀಡಿಲ್ಲ ಎಂದರೆ ಸಾಕ್ಷಿಯು ಆ ನೋಟೀಸ್ ಸುಳ್ಳಿನಿಂದ ಕೂಡಿದ್ದರಿಂದ ಉತ್ತರ ನೀಡಿಲ್ಲ ಎಂದು ನುಡಿಯುತ್ತಾರೆ. ಎಲ್ಲಿಯ ತನಕ ವಿದ್ಯಾಭ್ಯಾಸ ಮಾಡಿದ್ದೇನೆ ಎಂದರೆ ಸಾಕ್ಷಿಯು ಬಿ.ಎ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಕ್ರಯಕ್ಕೆ ಪಡೆಯುವ ಮುನ್ನ ನನ್ನ ತಂದೆ 1 ನೇ ಪ್ರತಿವಾದಿ ದಾಖಲಾತಿಗಳನ್ನು ಪರಿಶೀಲಿಸಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಕ್ರಯಕ್ಕೆ ಪಡೆಯುವ ಮುನ್ನ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿಯು 2 ಮತ್ತು 3 ನೇ ಪ್ರತಿವಾದಿಯರ ಹೆಸರಿನಲ್ಲಿ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರ ಹೆಸರಿಗೆ ಬರುವ ಮುನ್ನ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿಯು 2 ಮತ್ತು 3 ನೇ ಪ್ರತಿವಾದಿಯ ಅಜ್ಜ ಸಯ್ಯುದ್ ಹಯಾದ್ ಸಾಬ್ ಎಂದು ನುಡಿಯುತ್ತಾರೆ. ಸಯ್ಯುದ್ ಹಯಾದ್ ಸಾಬ್ ರವರಿಗೆ ಕತೀಜಾ ಬೀ ಎಂಬ ಮಗಳು ಇದ್ದಳು ಎಂದರೆ ಸಾಕ್ಷಿಯು ದಾಖಲೆಗಳ ಪ್ರಕಾರ ಇದ್ದಳು ಆದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

2 ಮತ್ತು 3 ನೇ ಪ್ರತಿವಾದಿಗಳ ತಂದೆ ತಾಯಿಯ ಹೆಸರು ಎಂದರೆ ಸಾಕ್ಷಿಯು ತಂದೆಯ ಹೆಸರು ಅಮೀರ್ ಸಾಬ್, ತಾಯಿಯ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರ ತಾಯಿಯ ಹೆಸರು ಕತೀಜಾ ಬೀ ಎಂದರೆ ಗೊತ್ತಿಲ್ಲ. ಸದರಿ ಕತೀಜಾ ಬೀ ರವರಿಗೆ 2 ಮತ್ತು 3 ನೇ ಪ್ರತಿವಾದಿಗಳ ಜೊತೆಗೆ ವಾದಿ ಹಾಗೂ ತಬಸುಮ್ ಮತ್ತು ಗುಲ್ ನಾಜ್ ಎಂಬ ಮಕ್ಕಳು ಇದ್ದಾರೆ ಎಂದರೆ ಗೊತ್ತಿಲ್ಲ. ವಾದಿ 2 ಮತ್ತು 3 ನೇ ಪ್ರತಿವಾದಿಗಳ ಅಕ್ಕ ಎಂದರೆ ನನಗೆ ನ್ಯಾಯಾಲಯಕ್ಕೆ ಬಂದ ಮೇಲೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳನ್ನು ಖರೀದಿ ಮಾಡುವ ಕಾಲಕ್ಕೆ ವಾದಿಯರ ವಂಶವೃಕ್ಷವನ್ನು ಪರಿಶೀಲನೆ ಮಾಡಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ತಾಯಿ

ಹರಳಹಳ್ಳಿ ಯವರು ಎಂದರೆ ಗೊತ್ತಿಲ್ಲ. ನನ್ನ ತಂದೆ ಹರಳಹಳ್ಳಿ ಗ್ರಾಮದವರು ಎಂದರೆ ಸರಿ. ವಾದಿಯ ತಾಯಿ ಹರಳಹಳ್ಳಿ ಗ್ರಾಮದವರು ಎಂದು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕತೀಜಾ ಬೀ ರವರಿಗೆ ವಾದಿ ಹಾಗೂ ಇತರೇ ಮಕ್ಕಳು ಇದ್ದಿದ್ದರಿಂದ 2 ಮತ್ತು 3 ನೇ ಪ್ರತಿವಾದಿಗಳು ದಾವಾ ಆಸ್ತಿಯ ಸಂಪೂರ್ಣ ಮಾಲೀಕರಲ್ಲ ಎಂದರೆ ಸರಿಯಲ್ಲ.

ವಾದಿಯ ತಂದೆ ತಾಯಿ ವಾದಿಗೆ ನಿಪಿ 7 ರಂತೆ ಬಳುವಳಿ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದು ಸೃಷ್ಟಿತ ದಾಖಲೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಯ ಸ್ವಾಧೀನದಲ್ಲಿದ್ದರು ಹಾಗೂ ಸಂಪೂರ್ಣ ಮಾಲೀಕರಾಗಿದ್ದರು ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತುಗಳ ಖಾತೆ ಮಾಡಿಕೊಂಡಿಲ್ಲದ ಒಂದೇ ಕಾರಣದಿಂದ ನನ್ನ ತಂದೆ ಹಾಗೂ 2 ಮತ್ತು 3 ನೇ ಪ್ರತಿವಾದಿಗಳು ನಿಡಿ 1 ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ವಾದಿ ಮತ್ತು ಅವರ ಸಹೋದರಿಯರು ಜೀವಂತ ಇದ್ದ ವಿಚಾರ ಗೊತ್ತಿದ್ದರೂ ಸಹ ಪ್ರತಿವಾದಿ 2 ಮತ್ತು 3 ರವರಿಂದ ಮೋಸದ ಕ್ರಯಪತ್ರವನ್ನು ನಮ್ಮ ತಂದೆ ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಸಹೋದರಿಯರಿಗೆ ಕ್ರಯದ ವಿಚಾರ ಗೊತ್ತಾಗಬಾರದು ಎಂದು ಸೈಯದ್ ಹಯಾದ್ ಸಾಬ್ ರವರಿಂದ ನೇರವಾಗಿ ಅವರ ಮೊಮ್ಮಕ್ಕಳಾದ ಪ್ರತಿವಾದಿ 2 ಮತ್ತು 3 ರವರ ಹೆಸರಿಗೆ ಖಾತೆ ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಎಲ್ಲಾ ಕಾನೂನುಬದ್ಧ ವಾರಸುದಾರರಿಂದ ನಿಡಿ 1 ಕ್ರಯಪತ್ರವನ್ನು ಬರೆಸಿಕೊಂಡಿಲ್ಲದ ಕಾರಣ ನನ್ನ ತಂದೆ 1 ನೇ ಪ್ರತಿವಾದಿ ಕಾನೂನುಬದ್ಧ ಮಾಲೀಕರಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ ಹೊರಬರುತ್ತದೆ ಎಂದು ನನಗೆ ಜಿಪಿಎ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ